DOC-4
T-2-2

Reg No B G 155 5—6—72

55th Year of Publication ‘Satyavadi’ daily, Mysore 4

In the State – The First
Golden Jubilee
Celebrated Paper
★
News Views Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂರಂಭಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನಗರ ಪಟ್ಟಣ ಆಸ್ತಿ ಮಿತಿ ರೂ. 5 ಲಕ್ಷ

ಗಡ್ಡದ ನೂರಾಟ

ಪಶ್ಚಿಮ ಜರ್ಮನಿಯಲ್ಲಿ ಸಮುದ್ರದಲ್ಲಿ ಬಿರುಸಾದ ಗುಡಿಸುವ ನೌಕೆಯಲ್ಲಿ ಕೆಲಸದ ಸಂದರ್ಭದಲ್ಲಿ ವಿಲ್ಹೆಲ್ಮ್ ತನ್ನ ಹುಲಸಾಗಿ ಬೆಳೆದಿದ್ದ ಗಡ್ಡವನ್ನು ಮಾರಿದನು; ಅವನ ಜೊತೆಗಾರರು 200 ಮಾರ್ಕ್ಸ್ ಹಣಕ್ಕೆ ಕೊಂಡುಕೊಂಡರು; ಆ ಹಣದಲ್ಲಿ ಅವನು ಆಟದ ಸಾಮಾನುಗಳನ್ನು ಕೊಂಡುಕೊಂಡು, ಅಲ್ಲಿ ಅನಾಥ ಹುಡುಗರಿಗೆ ಹಂಚಿದನು.

★

500 ವರ್ಷಗಳ ಹಿಂದಿನ ಸಾರಾಯಿ ಬಾಕಿ ತೀರಿಸಲಾಯಿತು

ಪಶ್ಚಿಮ ಜರ್ಮನಿಯ ಲೊಸರ್ ಸಾಕ್ಸನಿಯ ಇಬೆಕ್‌ನಲ್ಲಿಯ ಸಾರಾಯಿ ಸಂಸ್ಥೆಯು, ಸುಮಾರು 500 ವರ್ಷಗಳ ಹಿಂದೆ ಲೂಬೆಕ್ಸ್ ನಗರ ಸಭೆಗೆ ಸರಬರಾಜು ಮಾಡಬೇಕಾಗಿದ್ದು ನುಡಿತು ಹೋಗಿದ್ದುದನ್ನು 16 ಕುದುರೆ ಕಟ್ಟಿದ್ದ ಗಾಡಿಯಲ್ಲಿ ಆಡಂಬರವಾಗಿ ತುತ್ತೂರಿ ಊದುತ್ತಾ ಮೇ 7 ರಂದು ಹೊರಟಿತು – ತನ್ನ ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಲು ಹೀಗೆ ಮಾಡಲಾಯಿತು

★

ಅಶ್ರುವಾಯು ತೋಪುಗಳಿಂದ ಕೊಡೆ

ಹ್ಯಾಂಬರ್ಗ್ (ಡಾಡ್)—ಜರ್ಮನಿಯಲ್ಲಿಯ ಹ್ಯಾಂಬರ್ಗಿನಲ್ಲಿ ನಡೆದ ಫ್ಯಾಷನ್ ಪ್ರದರ್ಶನದಲ್ಲಿ ಕೊಡೆ ತಯಾರಿಕೆ ಸಂಸ್ಥೆಯೊಂದು ಹೊಸ ನಮೂನೆ ಕೊಡೆಯನ್ನು ಪ್ರದರ್ಶಿಸಿದ್ದಿತು; ಕೊಡೆಯನ್ನು ಹಿಡಿದುಕೊಂಡು ಹೋಗುತ್ತಿರುವಾಗ ಶತ್ರುಗಳನ್ನು ಎದುರಿಸಬೇಕಾದ ಸಂದರ್ಭ ಬಂದಲ್ಲಿ ಅನುಕೂಲವಾಗಿರುವಂತೆ ಅದರಲ್ಲಿ ಅಶ್ರುವಾಯು ಸಿಡಿಮದ್ದಿನ ತೋಟಗಳನ್ನು ಒದಗಿಸಿರುತ್ತಾರೆ ಅನಿರೀಕ್ಷಿತ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ಕೊಡೆಯಲ್ಲಿನ ಗುಂಡಿಯನ್ನು ಒತ್ತಿದರೆ ಅದರಿಂದ ಅಶ್ರುವಾಯು ತೋಟಗಳು ಹೊರಕ್ಕೆ ಹಾರಿ ವೈರಿಯನ್ನು ಅವರಿಸುತ್ತದೆ; ಮತ್ತೊಂದು ಹೊಸ ನಮೂನೆ ಕೊಡೆಯಲ್ಲಿ ರೇಡಿಯೋ ಕೂಡ ಅಳವಡಿಸಿ ಧರಿಸುವವರಿಗೆ ಬೇಜಾರಾಗದಂತೆ ಹಾಡುವ ಅಥವಾ ಕಾರ್ಯಕ್ರಮಗಳನ್ನು ಕೇಳುವ ಸೌಲಭ್ಯ ಸಹಾ ಇರುತ್ತದೆ. (ಯೂ ಪಿ ಎಸ್

ಸರ್ಕಾರದ ಪೆಚ್ಚು

ಭಾರತ ಸರ್ಕಾರದ ಖರ್ಚು 71–72 ರಲ್ಲಿ ರೂ. 6722 ಕೋಟಿ ಇದ್ದುದು 72–73 ರಲ್ಲಿ ರೂ. 6869 ಕೋಟಿಗೆ ಹೆಚ್ಚಿದೆ

★

ರಿಜಿಸ್ಟರ್ ಆದ ವೈದ್ಯರು

ಪಂಜಾಬ್‌ನಲ್ಲಿ ರಿಜಿಸ್ಟರ್ ಆಗಿರುವ ಆಯುರ್ವೇದ ಹಾಗೂ ಯುನಾನಿ ವೈದ್ಯರಲ್ಲಿ ಪಾದರಕ್ಷೆ ಹೊಲಿಯುವವರು, ಕ್ಷೌರಿಕರು ರಿಕ್ಷಾ ಎಳೆಯುವವರು ಮತ್ತು ಪಸಾರೆ ಅಂಗಡಿಯವರು ಇದ್ದಾರೆ.

★

ಮಂತ್ರಿಗಳ ಹಿತೋಕ್ತಿ

ತುಮಕೂರಿನಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ, ಆಂಜನೇಯ ವಿಗ್ರಹಗಳ ಪ್ರತಿಷ್ಠಾಪನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಮಂತ್ರಿ ಶ್ರೀ ಬದರೀನಾರಾಯಣರು, ಜನರು ರಾಮಾಯಣ ಸಂದೇಶವನ್ನು ಅನುಸರಿಸಲು ಕರೆ ನೀಡಿದರು. ಗಣಪತಿ, ಶಿವ, ನಂದಿ, ನವಗ್ರಹಗಳ ವಿಗ್ರಹಗಳು ಪ್ರತಿಷ್ಠಾಪನೆ ಆದವು.

★

ಮೈಸೂರಿನ ಕಾಣಿಕೆ

ನವ ದೆಹಲಿಯಲ್ಲಿ ನಿರ್ಮಿಸುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಟ್ಟಡಕ್ಕೆ ಮೈಸೂರು ಪ್ರದೇಶ ಕಾಂಗ್ರೆಸ್ ಎರಡುಲಕ್ಷದ ಒಂದು ರೂ. ಕೊಟ್ಟಿದೆ

★ ಪಾಕೀಸ್ತಾನದ ಸಂಗಡ ಸ್ನೇಹದಿಂದಿರಲು ಭಾರತ ಸದಾ ಯತ್ನಿಸುತ್ತಿದೆ ಎಂದು ರಕ್ಷಣಾ ಮಂತ್ರಿಗಳು ತಿಳಿಸಿರುವರು.

ಹಿಂದೂಗಳ್ಳಾದರು

ಮಧುರೈನಲ್ಲಿ ಓರ್ವ ಸ್ವಿಸ್ ರಾಷ್ಟ್ರೀಯನು, ಆತನ ಅಮೇರಿಕಾ ಪತ್ನಿ, ಅವರ 8 ತಿಂಗಳು ಮಗುವು ಹಿಂದೂಮತಕ್ಕೆ ಸೇರಿದರು.

ಕಳ್ಳತನ

ಕಳೆದ 3 ವರ್ಷಗಳಲ್ಲಿ ಭಾರತ ದೇವಾಲಯಗಳ, ಮ್ಯೂಸಿಯಂಗಳ ಹಾಗೂ ಸ್ಮಾರಕಗಳ ವಿಗ್ರಹ ಮತ್ತು ಕೆತ್ತನೆಗಳು 2182 ಕಳುವಾಗಿವೆ.

●

ಮಂತ್ರಿಮಂಡಲ ತೀರ್ಮಾನ

ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಲು ಮತ್ತು ಜಿಲ್ಲ ಮಟ್ಟದಲ್ಲಿ ಕನ್ನಡ ಜಾರಿಗೆ ತರಲು ಮೈಸೂರು ಮಂತ್ರಿಮಂಡಲ ತೀರ್ಮಾನ ಕೈಗೊಳ್ಳುವುದೆನ್ನಲಾಗಿದೆ.

★

ಶಾಸನ ಸಭೆ

ಈ ತಿಂಗಳು 19 ನೇ ತಾರೀಖಿನಿಂದ ಮೈಸೂರು ಶಾಸನ ಸಭೆಯ ಆಯವ್ಯಯಪಟ್ಟಿ ಅಧಿವೇಶನ ಪ್ರಾರಂಭವಾಗುವುದು.

★

ಸಮಿತಿ ಶಿಫಾರಸು

ನವ ದೆಹಲಿಯಿಂದ ಬಂದಿರುವ ವರದಿಯಂತೆ, ಐದು ಮಂದಿ ಇರುವ ಒಂದು ಸಂಸಾರಕ್ಕೆ ರೂ. 5 ಲಕ್ಷ ಪರಿಮಿತಿಯನ್ನು ಇಡುವಂತೆ ನಗರ ಪಟ್ಟಣ ಆಸ್ತಿ ಮಿತಿ ಸಮಿತಿಯು ಶಿಫಾರಸು ಮಾಡಿದೆ.

★

ರೋಗಿಗಳಿಗೆ ತೊಂದರೆ

ಗುಜರಾತಿನಲ್ಲಿ ರಾ ಸರ್ಕಾರಿ ಮತ್ತು ಪೌರಸಭೆ ಆಸ್ಪತ್ರೆಗಳಲ್ಲಿ ಹೌಸ್ ಸರ್ಜರ್‌ಗಳ ಮುಷ್ಕರ ಪ್ರಾರಂಭವಾಗಿದೆ ರೋಗಿಗಳಿಗೆ ತುಂಬಾ ತೊಂದರೆ ಆಗಿದೆ.

– ಖ್ಯಾತ ಪತ್ರಿಕೋದ್ಯೋಗಿಯ ನಿಧನ

ಮೈಸೂರು— ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮಾಲೀಕರಾದ ಮತ್ತು ನಿರ್ಭಯ ನಿರ್ದಾಕ್ಷಿಣ್ಯ ಪತ್ರಿಕೋದ್ಯೋಗಿಗಳಾಗಿದ್ದ ಶ್ರೀ ಎಸ್ ವಿ. ಗುಂಡಪ್ಪನವರು ನಿನ್ನೆ ದಿವಸ ಸ್ಕೂಟರ್ ಅಪಘಾತದಲ್ಲಿ ನಿಧನರಾದ ವಾರ್ತೆ ಪ್ರಕಟಿಸಲು ವಿಷಾದಿಸುತ್ತೇನೆ

★

ಅತ್ಯಾಡಂಬರ ವಿವಾಹ

ಮಾರಾವ್ಯಾನಗರ— ಫಿಲಿಪ್ಪೈನಿನ ಲೆನಾವೊ ಸರೋವರದ ಪಕ್ಕದ ನಗರದಲ್ಲಿ ಮುಸ್ಲಿಂ ರಾಜಮನೆತನಗಳ, ರಾಜಕುಮಾರಿಯಾರ್ಮಿ ರುಟೆಕ್ವಿನೋ ಮತ್ತು ಸಾಮಂತ ನಾಸೆರ್ ಸುಗಾಹ್ಮನ್‌ರವರ ವಿವಾಹವು ಅತ್ಯಂತ ಆಡಂಬರವಾಗಿ ನಡೆಯಿತು – ವಿವಾಹಕ್ಕಾಗಿ ರೂ. 1216662 ಖರ್ಚಾಯಿತು – 10 ಸಾವಿರಕ್ಕೂ ಹೆಚ್ಚು ಜನ ಅತಿಥಿಗಳಿದ್ದರು – 10 ಸಾವಿರ ಕೋಳಿ ಮೇರಿಗಳು, 500 ಹಸುಗಳು, 400 ಮೂಟೆ ಅಕ್ಕಿ ಆಹಾರಕ್ಕೆ ಉಪಯೋಗಿಸಲಾಗಿತ್ತು – 3 ದಿನಗಳ ಆನಂದವೇ ಆನಂದ – ರಸ್ತೆಗಳಲ್ಲಿ ಸಂಗೀತ, ನೃತ್ಯ, ವಿವಿಧ ಆಟಗಳು ನಡೆದವು - ನಂಟರಿಷ್ಟರು, ಅತಿಥಿಗಳನ್ನು ಸರೋವರದಲ್ಲಿ ನೂರಾರು ಅಲಂಕೃತ ದೋಣಿಗಳ ಓಡಾಟವಿತ್ತು – ಸರೋವರದ ಸುತ್ತಲ ಪಟ್ಟಣಗಳಲ್ಲಿನ ಎಲ್ಲರಿಗೂ ಆಹ್ವಾನ ಪತ್ರಿಕೆ ಸಿಕ್ಕುವಂತೆ ಹತ್ತು ಸಾವಿರ ಆಹ್ವಾನ ಪತ್ರಿಕೆಗಳನ್ನು ವಿಮಾನ ಮೂಲಕ ಹಾಕಲಾಗಿತ್ತು.

○

ನವದೆಹಲಿ— ಒಂದು ಅಮೇರಿಕಾ ವ್ಯಾಪಾರ ಸಂಸ್ಥೆಯು ಏರ್‌ಕಂಡಿಷನ್ಡ್ ಜೀನ್ಸ್‌ಗಳನ್ನು ತಯಾರಿಸಿದೆ.

★

ಚಂಡೀಘರ ಉಪಯೋಗವಿಲ್ಲದೆ ಪಾಕ್ ಸೈನಿಕರು ಪಂಜಾಬಿನ ಅಜ್ನಾಲಾ ಭಾಗದಲ್ಲಿ ಗುಂಡು ಹಾರಿಸಿದರು – ಗಡಿ ರಕ್ಷಣಾ ಪಡೆಯ ಒಬ್ಬ ಜವಾನ ಗಾಯಗೊಂಡ.

ಪರಿಶೀಲನಾರ್ಹ

1952 ರಲ್ಲಿ ಮೊದಲನೆಯ ಮಹಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನ ಪರವಾಗಿ ಮೈಸೂರು ಪುರಭವನದ ಆವರಣದಲ್ಲಿ ಇಂದಿನ ರೈಲ್ವೆ ಮಂತ್ರಿಯವರು, ಅಂದಿನ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರು ಆಗಿದ್ದ ಶ್ರೀ ಕೆ. ಹನುಮಂತಯ್ಯನವರು ದಿಕ್ಕುದಿಕ್ಕುಗಳಿಗೆ ಕೇಳುವಂತೆ, ಅಸಂಖ್ಯಾತ ಜನ ಸೇರಿದ್ದ ಭಾರಿ ಜನ ಸಮೂಹವನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಅಂದು ಸಮಾಜವಾದಿ ಪಕ್ಷದ ವರು ಹೇಳುತ್ತಿದ್ದ '' ಉಳುವನನೇ ಹೊಲದ ಒಡೆಯ " ಎಂಬ ಘೋಷಣೆಯನ್ನು ಪ್ರಸ್ತಾಪಿಸುತ್ತಾ, " ಸ್ಪೇನ್‌ನಲ್ಲಿ ಸೋಷಲಿಸ್ಟರು ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇವೆ ಎಂದು ಹೇಳಿ ಜನತೆಯಿಂದ ಮತಗಳಿಸಿ ರಾಜ್ಯಭಾರ ಪಡೆದರು. ಹೇಳಿದ ರೀತಿ ಮಾಡಲು ಸೋಷಲಿಸ್ಟರಿಗೆ ಆಗಲಿಲ್ಲ ಆದರ ಫಲವಾಗಿ ಕ್ರಾಂತಿ ನಡೆದು ಜನ ಫ್ರಾಂಕೋ ಡಿಕ್ಟೇಟರ್‌ಷಿಪ್ ಬಂತು " ಎಂದು ಸಮಯೋಚಿತವಾದ ಎಚ್ಚರಿಕೆ ನೀಡಿದರು ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, " ನಮ್ಮ ದೇಶದಲ್ಲಿ ತೆನಲಿ ತೆಗೆದರೆ ಪ್ರಾಣ ತೆಗೆಯುತ್ತಾರೆ. ಪರಿಸ್ಥಿತಿ ಹೀಗಿರುವಾಗ ಸೋಷಲಿಸ್ಟರ ನೀತಿಗೆ ಜನತೆ ಒಪ್ಪಿಗೆ ಕೊಡುವರೇ ? " ಎಂದರು ಇಪ್ಪತ್ತು ವರ್ಷಗಳ ಹಿಂದೆ ಶ್ರೀ ಕೆ ಹನುಮಂತಯ್ಯನವರು ಹೇಳಿದ ಮಾತು ಇಂದಿಗೂ ಸತ್ಯದಿಂದ ಕೂಡಿರುವುದಲ್ಲವೇ ಎಂಬುದು ಪರಿಶೀಲನಾರ್ಹ.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠವೆನ್ನುವುದು ಸೊಕ್ಕಿನ ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆ ನೆ - ಹು ಡು ಗ

ವುಡ್‌ಲ್ಯಾಂಡ್ 2-6-72ರಿಂದ ಅಮೋಘ 5 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃ ದ ಯ ಸಂ ಗ ಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು — ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಟು ಸರ್ ವಿತ್ ಲೌ

ಅ ಪೆ ರಾ 2 ನೇ ವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜ ರೂ ರ ತ್

ಪಾತ್ರ– ರಿನ ರಾಯ್, ವಿಜಯ ಅರೋರ, ಅಸಿತ್ ಸೇನ್, ಮನಮೋಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

Protect the Cow

SHAKTI SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4